ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಪ್ರಶಸ್ತಿ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE : 12/10/2019

# ಇಥಿಯೋಪಿಯಾ ಪ್ರಧಾನಿಗೆ ಶಾಂತಿ ನೊಬೆಲ್

## ಎರಿಟ್ರಿಯಾ ಜತೆಗಿನ ಗಡಿ ವಿವಾದ ಬಗೆಹರಿಸಿದ್ದಕ್ಕಾಗಿ ಅಬಿ ಅಹ್ಮದ್‌ಗೆ ಒಲಿದ ಗೌರವ

• ಪಿಟಿಐ ಓಸ್ಲೋ

ಇಥಿಯೋಪಿಯಾ ಪ್ರಧಾನಿ ಅಬಿ ಅಹ್ಮದ್ ಅಲಿ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕಾರ ಘೋಷಣೆಯಾಗಿದೆ. ಎರಿಟ್ರಿಯಾ ದೊಂದಿಗೆ ಇಥಿಯೋಪಿಯಾ ವೈರತ್ವ ಹೊಂದಿದ್ದು, ಉಭಯ ದೇಶಗಳ ನಡುವಿನ ಸಂಘರ್ಷ ಮಯ ವಾತಾವರಣ ತಪ್ಪಿಸಲು ಪಟ್ಟ ಶ್ರಮಕ್ಕಾಗಿ ಈ ಪ್ರಶಸ್ತಿ ಸಂದಿದೆ.



ಎರಿಟ್ರಿಯಾ ಇಥಿಯೋಪಿಯಾ ದೇಶದ ಪಕ್ಕದ ದೇಶವಾಗಿದ್ದು, ಎರಡೂ ದೇಶಗಳ ನಡುವೆ ಗಡಿ ವಿವಾದವಿದೆ. ಸಂಘರ್ಷಮಯ ವಾತಾವರಣವೂ ಇಲ್ಲಿ ಇತ್ತು. ಈ ಸಮಸ್ಯೆಯನ್ನು 2018ರಲ್ಲಿ ಪ್ರಧಾನಿಯಾದ ಅಬಿ ಅವರು ಶಾಂತಿಒಪ್ಪಂದ ಮಾಡಿಕೊಂಡು ಬಗೆಹರಿಸಿದ್ದಾರೆ. ಅಲ್ಲದೆ, ಅವರು ಅಂತಾರಾಷ್ಟ್ರೀಯ ಸಹಕಾರದಲ್ಲಿ ಕೂಡ ಅವರು ಸಾಕಷ್ಟು ಶ್ರಮ ವಹಿಸಿದ್ದಾರೆ ಎಂದು ನೊಬೆಲ್ ಶಾಂತಿ ಪ್ರಶಸ್ತಿ ಆಯ್ಕೆ ಸಮಿತಿ ಕೊಂಡಾಡಿದೆ. ಅಬಿ 43 ವರ್ಷ ವಯಸ್ಸಿನವರಾಗಿದ್ದು, ಚಿಕ್ಕ ವಯಸ್ಸಿಗೇ ಅವರಿಗೆ ಪ್ರಶಸ್ತಿ ಸಂದಿರುವುದು ವಿಶೇಷ.

ಅಬಿ ಅಹ್ಮದ್ ಅವರು ತಾವು ದೇಶದ ಪ್ರಧಾನಿಯಾದ 100 ದಿನದೊಳಗೆ ತುರ್ತು ಪರಿಸ್ಥಿತಿಯನ್ನು ಅಂತ್ಯಗೊಳಿಸಿ, ರಾಜಕೀಯ ಕೈದಿಗಳನ್ನು ಜೈಲಿನಿಂದ ಬಿಡುಗಡೆ ಮಾಡಿಸಿದ್ದರು. ಮಾಧ್ಯಮಗಳ ಮೇಲೆ ಹೇರಲಾಗಿದ್ದ ನಿರ್ಬಂಧ ತೆಗೆದು ಹಾಕಿದ್ದರು. ರಾಜಕೀಯಕ್ಕೆ ಮಹಿಳೆಯರ ಪ್ರವೇಶವನ್ನು ಪ್ರೋತ್ಸಾಹಿಸಿದ್ದರು. ಭ್ರಷ್ಟಾಚಾರ ಆರೋಪ ಹೊತ್ತಿದ್ದ ಸೇನೆ ಮತ್ತು ನಾಗರಿಕ ಅಧಿಕಾರಿಗಳನ್ನು ಕೆಲಸದಿಂದ ತೆಗೆದುಹಾಕಿ ಆಡಳಿತದಲ್ಲಿ ಶಿಸ್ತು ಮೂಡಿಸಿದ್ದರು.

11